ದಿಃ 27.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಮುಖ್ಯ ವಿಚಾರಣೆಃ ಶ್ರೀ ಹೆಚ್.ಕೆ.ಡಿ ವಕೀಲರಿಂದ 1ನೇ ಎದುರುದಾರರ ಪರವಾಗಿ</u>

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 10.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಹೆಚ್.ಕೆ.ಡಿ ವಕೀಲರಿಂದ 1 ನೇ ಎದುರುದಾರರ ಪರವಾಗಿ

2. ಕೆ.ಎ.18/ಸಿ.1583 ರ ಆರ್.ಸಿ ಯನ್ನು ಹಾಜರು ಮಾಡಿದ್ದು ಅದನ್ನು ನಿ.ಆರ್.1 ಎಂದು, ವಾಹನ ಚಾಲನಾ ಪರವಾನಿಗೆಯನ್ನು ಹಾಜರು ಮಾಡಿದ್ದು ಅದನ್ನು ನಿ.ಆರ್.2 ಎಂದು, ಕೆ.ಎ.18/ಸಿ.1583 ಆಟೋದ permit ಅನ್ನು ಹಾಜರು ಪಡಿಸಿದ್ದು ಅದನ್ನು ನಿ.ಆರ್.3 ಎಂದು, ಕೆ.ಎ.18/ಸಿ.1583 ಆಟೋದ ವಿಮೇಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಆರ್.4 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಹೆಚ್.ಆರ್.ಸಿ ವಕೀಲರಿಂದ ಅರ್ಜಿದಾರರ ಪರವಾಗಿ

3. ಅಪಘಾತ ಪಡಿಸಿದ ಆಟೋ ರಿಕ್ಷಾದ ಸಂಖ್ಯೆ ಕೆ.ಎ.18/ಸಿ.1583 ಆಗಿತ್ತು ಎಂದರೆ ಸರಿ. ಅಪಘಾತವಾದ ದಿನ ಸದರಿ ಆಟೋದ ಚಾಲಕ ಮತ್ತು ಮಾಲೀಕ ನಾನೇ ಆಗಿದ್ದೆ ಎಂದರೆ ಸರಿ. ಸದರಿ ಆಟೋವನ್ನು ನಾನು ಪ್ರಯಾಣಿಕರನ್ನು ಕೂಡಿಸಿಕೊಂಡು ಬಾಡಿಗೆ ಮಾಡುತ್ತಿದ್ದೆ ಎಂದರೆ ಸರಿ. ಅಪಘಾತವಾದ ದಿನ ಮೃತ ಕಾಳಯ್ಯ ರವರು ಸಹ ಸದರಿ ಆಟೋದಲ್ಲಿ ಪ್ರಯಾಣಿಸುತ್ತಿದ್ದರು ಎಂದರೆ ಸರಿ. ಸದರಿ ಆಟೋ ಪೂರ್ಣಚಂದ್ರ ತೇಜಸ್ವಿ ರವರ ಎಸ್ಟೇಟ್ ಮುಂಭಾಗದ ರಸ್ತೆಯಲ್ಲಿ ಅಪಘಾತವಾಗಿತ್ತು ಎಂದರೆ ಸರಿ. ಅಪಘಾತವಾದಾಗ ಆಟೋದಲ್ಲಿ ಇದ್ದ ಮೃತ ಕಾಳಯ್ಯ ರವರಿಗೆ ತೀವ್ರ ಸ್ವರೂಪದ ಗಾಯಗಳು ಆಗಿದ್ದವು ಎಂದರೆ ಸರಿ. ಅಪಘಾತದ ದಿನ ನಾನು ವಾಹನ ಚಲಾಯಿಸಲು ಚಾಲನಾ ಪರವಾನಿಗೆ ಮತ್ತು ಆಟೋಗೆ permit ಮತ್ತು ವಿಮೇಯನ್ನು ಹೊಂದಿದ್ದೆ ಎಂದರೆ ಸರಿ. ಆ ಕಾರಣದಿಂದ ನಾನು ಮೃತ ಕಾಳಯ್ಯ ರವರು ಕುಟುಂಬಕ್ಕೆ ಪರಿಹಾರವನ್ನು ನೀಡಲು ಬಾಧ್ಯಸ್ಥ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಸಿ.ಒ.ವೈ. ವಕೀಲರಿಂದ 2ನೇ ಎದುರುದಾರರ ಪರವಾಗಿ</u>

4. ನನ್ನ ತಂದೆಯ ಹೆಸರು ರಾಮಯ್ಯ, ನನ್ನ ತಂದೆಯ ಹೆಸರನ್ನು ಕರಿಯಯ್ಯ ಎಂದು ಸಹ ಕರೆಯುತ್ತಿದ್ದರು. ನಾನು ಹೊಸ ಆಟೋವನ್ನು ಅಪಘಾತವಾಗುವ 5 ವರ್ಷದ ಮೊದಲು ಖರೀದಿಸಿದ್ದೆ. ಅಪಘಾತವಾದ ರಸ್ತೆಯಲ್ಲಿ ನಾನು ಆಟೋವನ್ನು ಚಲಾಯಿಸಲು permit ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿ.ಆರ್.3 permit ಅಪಘಾತದ ದಿನ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿ.ಆರ್.3 permit ಅಪಘಾತವಾದ ನಂತರ ಪಡೆದಿದ್ದು, ಅದು ದಿಃ 10.04.2023 ರಿಂದ ದಿಃ 09.04.2028 ರವರೆಗೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಅಪಘಾತವಾದ ದಿನ ದಿಃ 09.12.2022 ರಂದು ಸದರಿ ಆಟೋಗೆ permit ಇರಲಿಲ್ಲ ಎಂದರೆ ಸರಿ. ಅಪಘಾತವಾದ ದಿನ ಆಟೋ permit ಇಲ್ಲದ ಕಾರಣ 2ನೇ ಎದುರುದಾರರು ಅರ್ಜಿದಾರರಿಗೆ ಯಾವುದೇ ಪರಿಹಾರವನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ